
# ಸಮಾಜೋ-ಭಾವನಾತ್ಮಕ ಕಲಿಕೆಯ ಮೇಲೆ ಒತ್ತು | ಅಜೀಂ ಪ್ರೇಮ್‌ಜಿ ಶಾಲೆ, ಕಲಬುರಗಿ


ಫರ್ಝಾನಾ ಬೇಗಂ

ಮಕ್ಕಳಲ್ಲಿ ಸಮಾಜೋ–ಭಾವನಾತ್ಮಕ ಬುದ್ಧಿಮತ್ತೆಯು (Social-emotional intelligence) ಅಂತರ್ಗತವಾಗಿಯೇ ಇರುತ್ತದೆ. ಸಾಮಾಜಿಕ–ಭಾವನಾತ್ಮಕ ಸಾಮರ್ಥ್ಯಗಳು ನಮ್ಮನ್ನೇ ನಾವು ವ್ಯಕ್ತಪಡಿಸಿಕೊಳ್ಳಲು, ಇತರರನ್ನು ಅರ್ಥ ಮಾಡಿಕೊಳ್ಳಲು, ಬದಲಾವಣೆಗಳಿಗೆ ಹೊಂದಿಕೊಳ್ಳಲು, ದೈನಂದಿನ ಅಗತ್ಯಗಳನ್ನು, ಸವಾಲುಗಳನ್ನು ಮತ್ತು ಒತ್ತಡಗಳನ್ನು ನಿಭಾಯಿಸಲು ನಮಗೆ ಸಹಾಯ ಮಾಡುತ್ತವೆ. ಶಾಲೆಯಲ್ಲಿ ಪರಿಚಯಿಸುವ ಸಾಮಾಜಿಕ – ಭಾವನಾತ್ಮಕ ಕಲಿಕೆಯ ಕಾರ್ಯತಂತ್ರಗಳು ಮಕ್ಕಳ ನೈತಿಕತೆ ಮತ್ತು ನೈತಿಕ ಮೌಲ್ಯಗಳ ಮೇಲೆ ದೀರ್ಘಕಾಲೀನ ಪರಿಣಾಮಗಳನ್ನು ಬೀರುತ್ತವೆ. ಜೊತೆಗೆ ಅವರ ಶೈಕ್ಷಣಿಕ ಪ್ರಗತಿಯನ್ನು ಸದ್ದಿಲ್ಲದೆ ವರ್ಧಿಸುತ್ತವೆ. ಬಹುಬೇಗನೆ ಮೊದಲನಂತಾಗುವ ಗುಣವುಳ್ಳ ಹಾಗೂ ಸಾಮಾಜಿಕ ಮತ್ತು ಭಾವನಾತ್ಮಕ ಬುದ್ಧಿಮತ್ತೆಯನ್ನು ಹೊಂದಿರುವ ಮಕ್ಕಳನ್ನು ಬೆಳೆಸುವುದು ಪಾಲಕರಿಗೆ ಒಂದು ಸವಾಲಾಗಿದೆ. ಮಗುವಿನ ಮೆದುಳಿಗೆ, ಸಾಮಾಜಿಕ–ಭಾವನಾತ್ಮಕ ಕೌಶಲಗಳ ಬೆಳವಣಿಗೆಗೆ ಹುಟ್ಟಿನಿಂದ ಐದು ವರ್ಷಗಳವರೆಗಿನ ಅವಧಿಯು ಅತ್ಯಂತ ಮುಖ್ಯವಾದುದು. ಮಗುವಿನ ಜೀವಮಾನದುದ್ದದ ಪ್ರಗತಿ ಮತ್ತು ಯಶಸ್ಸುಗಳು ಬಹುಮಟ್ಟಿಗೆ ಈ ಅವಧಿಯಲ್ಲಿನ ಅದರ ಸಹಜ ಗುಣ (ಆನುವಂಶಿಕತೆ) ಹಾಗೂ ಅದಕ್ಕೆ ದೊರಕಿದ ಪೋಷಣೆಯನ್ನು (ಆರೈಕೆ, ಪೌಷ್ಟಿಕತೆ, ಪ್ರಚೋದನೆ, ಉತ್ತೇಜನ, ಸುತ್ತಮುತ್ತಲಿನ ಪರಿಸರ ಮತ್ತು ಬೋಧನೆ) ಅವಲಂಬಿಸಿದೆ. ಮಗು ತನ್ನ ಆರಂಭಿಕ ಬದುಕಿನ ಬಹುತೇಕ ಹದಿನೈದು ವರ್ಷಗಳನ್ನು ಶಾಲೆಯಲ್ಲಿ ಕಳೆಯುತ್ತದೆ. ಆದ್ದರಿಂದ ಮಗುವಿನ ಸಾಮಾಜಿಕ–ಭಾವನಾತ್ಮಕ ಬೆಳವಣಿಗೆಗೆ ಬೇಕಾದಷ್ಟು ಬೆಂಬಲ ಹಾಗೂ ಅವಕಾಶಗಳನ್ನು ಶಾಲೆಯು ಒದಗಿಸಬೇಕು. ಸಾಮಾಜಿಕ – ಭಾವನಾತ್ಮಕ ಕಲಿಕೆಯು ಸ್ವ–ಅರಿವು (ನಾನು ಯಾರು?), ಸ್ವ–ನಿರ್ವಹಣೆ (ನಾನು ಏನನ್ನು ಮಾಡಬೇಕು? ಅದನ್ನು ನಾನು ಹೇಗೆ ಮಾಡಬೇಕು?), ಜವಾಬ್ದಾರಿಯುತವಾಗಿ ನಿರ್ಧಾರವನ್ನು ತೆಗೆದುಕೊಳ್ಳುವುದು (ಯಾವುದು ಸರಿ? ಯಾವುದು ತಪ್ಪು? ಯಾವುದು ಒಳ್ಳೆಯದು ಅಥವಾ ಕೆಟ್ಟದ್ದು?), ಸಾಮಾಜಿಕ ಅರಿವುಗಳಂತಹ (ತನ್ನ ವ್ಯಕ್ತಿತ್ವವನ್ನು ಗುರುತಿಸಿ–ಕೊಳ್ಳುವುದು, ಇತರರ ವ್ಯಕ್ತಿತ್ವವನ್ನು ಗುರುತಿಸುವುದು) ಸಂಬಂಧದ ಕೌಶಲಗಳು (ಆರೈಕೆ, ಪರಿಗಣನೆ, ಅನುಕಂಪ, ಸಹಾನುಭೂತಿ) ಹಲವಾರು ಅಂಶಗಳನ್ನು ಒಳಗೊಳ್ಳುತ್ತದೆ. ಈ ಅಂಶಗಳಲ್ಲಿನ ನಿಪುಣತೆಯು ವಿದ್ಯಾರ್ಥಿಗಳಿಗೆ ವಿಚಾರ–ವಂತರಾಗಲು, ನೀತಿವಂತರಾಗಲು ಅನುವು ಮಾಡಿಕೊಡುತ್ತದೆ. ಆದ್ದರಿಂದ ಶಾಲೆಯಲ್ಲಿ ಪ್ರತಿಯೊಂದು ಮಗುವನ್ನು ಅರ್ಥ–ಮಾಡಿಕೊಳ್ಳುವಲ್ಲಿ ಮತ್ತು ಮಕ್ಕಳಿಗೆ ಈ ಸಂಬಂಧವಾಗಿ ನೆರವು ನೀಡುವಲ್ಲಿ ಶಿಕ್ಷಕರು ಪರಸ್ಪರ ಸಹಯೋಗದಿಂದ ಒಟ್ಟಾಗಿ ಕೆಲಸ ಮಾಡಬೇಕು. ಇದರಲ್ಲಿ ಪ್ರಮುಖ ಪಾತ್ರವನ್ನು ನಿರ್ವಹಿಸುವ ಇನ್ನಿತರ ಭಾಗೀದಾರರು ಇದ್ದಾರೆ ಎಂದು ಯೂರಿ ಬ್ರೋನ್ಫೆನ್ ಬ್ರನ್ನರ್ ಅವರು ತಮ್ಮ ಪರಿಸರ ಮಾದರಿಯಲ್ಲಿ ಉಲ್ಲೇಖಿಸುತ್ತಾರೆ.




ಚಿತ್ರ 1. ಬ್ರೋನ್‌ಫೆನ್‌ಬ್ರನ್ನರ್ (1979) ಅವರ ಮಾದರಿಯನ್ನು ಆಧರಿಸಿ ಜೋಲ್ ಗಿಬ್ಸ್ ಅವರು ರಚಿಸಿದ ರೇಖಾಕೃತಿ i

ಶಾಲೆಯೆನ್ನುವುದೊಂದು ಚಿಕ್ಕ ಸಮಾಜ. ನಮ್ಮ ಶಾಲೆಯಲ್ಲಿ ಮಕ್ಕಳ ಸಾಮಾಜಿಕ-ಭಾವನಾತ್ಮಕ ಕಲಿಕೆ ಮತ್ತು ಬೆಳವಣಿಗೆಯನ್ನು ಪ್ರೋತ್ಸಾಹಿಸಲು ನಾವು ಶಿಕ್ಷಕರು ಅವರ ದಿನಚರಿಯಲ್ಲಿ ವಿವಿಧ ಚಟುವಟಿಕೆಗಳನ್ನು ಅಳವಡಿಸುತ್ತೇವೆ. ತರಗತಿ ಕೊಠಡಿಯೊಂದರಲ್ಲಿ ಮಕ್ಕಳು ಪರಸ್ಪರ ದೂರುತ್ತಾರೆ, ಅಳುತ್ತಾರೆ, ಛೇಡಿಸುತ್ತಾರೆ, ಹೊಡೆದಾಡುತ್ತಾರೆ, ತೊಂದರೆ ಕೊಡುತ್ತಾರೆ. ಸಾಮಾಜಿಕ-ಭಾವನಾತ್ಮಕ ಕಲಿಕೆಯು ಅವರಿಗೆ ತಮ್ಮ ಭಾವನೆಗಳನ್ನು ಗುರುತಿಸಲು, ನಿಭಾಯಿಸಲು ಸಹಾಯ ಮಾಡುತ್ತದೆ. ಶಿಕ್ಷಕರಾಗಿ ನಾವು ಅವರಿಗೆ ಧನಾತ್ಮಕ ಗುರಿಗಳನ್ನು ಸಾಧಿಸಲು ನೆರವು ನೀಡುತ್ತೇವೆ. ಈ ಧನಾತ್ಮಕ ಗುರಿಗಳು, ಸಹಾನುಭೂತಿ ತೋರಿಸುವುದು (showing empathy), ಪರಸ್ಪರರೊಡನೆ ಸಕಾರಾತ್ಮಕ ಸಂಬಂಧವನ್ನು ಕಾಪಾಡಿಕೊಳ್ಳುವುದು, ಜವಾಬ್ದಾರಿಯುತ ನಿರ್ಧಾರಗಳನ್ನು ತೆಗೆದುಕೊಳ್ಳುವಂತಹ ಪ್ರಮುಖ ಸಾಮಾಜಿಕ-ಭಾವನಾತ್ಮಕ ಮೌಲ್ಯಗಳನ್ನು ಆಧರಿಸಿವೆ. ಅನುಭವ, ಘಟನೆ ಮತ್ತು ಬದುಕಿನ ಸಂದರ್ಭಗಳನ್ನು ಹಂಚಿಕೊಳ್ಳುವುದನ್ನು ನಾವು ಉತ್ತೇಜಿಸುತ್ತೇವೆ. ಕೇವಲ ಮಹಾನ್ ವ್ಯಕ್ತಿಗಳ ಕಥೆಗಳನ್ನು ಓದುವುದರ ಬದಲಾಗಿ ನಾವು ನಮ್ಮದೇ ಬದುಕಿನಿಂದ ಕಥೆಗಳನ್ನು ಹೆಕ್ಕಿ, ಹಂಚಿಕೊಳ್ಳುತ್ತೇವೆ. ಮಕ್ಕಳಿಗೆ ಸುರಕ್ಷಿತವಾದ ಹಾಗೂ ಸುಭದ್ರವಾದ ಒಂದು ಪರಿಸರವನ್ನು ನಿರ್ಮಿಸುವುದರ ಮೂಲಕ ಅವರಿಗೆ ದೈಹಿಕ ಮತ್ತು ಭಾವನಾತ್ಮಕ ಆರಾಮವನ್ನು, ಕಾಳಜಿಯನ್ನು ನೀಡಲು ಪ್ರಯತ್ನಿಸುತ್ತೇವೆ. ಇದರಿಂದ ಅವರು ತಮ್ಮ ಆಲೋಚನೆ, ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಮತ್ತು ತಮ್ಮ ತೊಂದರೆ, ಕಷ್ಟಗಳನ್ನು ಹಂಚಿಕೊಳ್ಳಲು ಸಾಧ್ಯವಾಗುತ್ತದೆ. ಅವರವರ ಅಗತ್ಯ ಮತ್ತು ಸನ್ನಿವೇಶವನ್ನು ಅವಲಂಬಿಸಿ, ನಾವು ಪ್ರತಿ ವಿದ್ಯಾರ್ಥಿಯೊಡನೆ ಮಾತುಕತೆಯನ್ನು ನಡೆಸುತ್ತೇವೆ. ಎಲ್ಲರನ್ನೂ ಸಮಾನವಾಗಿ ನೋಡುವುದರ ಮೂಲಕ ಮತ್ತು ಎಲ್ಲರಿಗೂ ಸಮಾನ ಅವಕಾಶಗಳನ್ನು ನೀಡುವುದರ ಮೂಲಕ ಶಾಲೆಯ ಆವರಣದೊಳಗೆ ನಾವು ಜಾತ್ಯತೀತತೆಯನ್ನು (secularism) ಅಳವಡಿಸಿಕೊಳ್ಳುತ್ತೇವೆ.


Pledge

- We the students ~~of~~ and teachers of Azim Premji school, take this pledge.
- we will always keep ourselves clean
- we will keep the surrounding of our home and school clean
- we will follow the rules of the school.
- This is our school, we will come to school everyday. we will listen to our teachers and friends.
- we will respect the birds, animals & plants around us. we will respect the food we eat and the things we use.

we will help each other and learn together.



ಚಿತ್ರ 2. ತಮ್ಮ ಸುತ್ತಲಿರುವ ಪ್ರತಿಯೊಬ್ಬರನ್ನು ಮತ್ತು ಎಲ್ಲವುಗಳನ್ನು ಗೌರವಿಸುತ್ತೇವೆ ಎಂದು ಬೆಳಗಿನ ಸಮಯದಲ್ಲಿ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಒಟ್ಟಾಗಿಯೇ ಪ್ರತಿಜ್ಞೆಯನ್ನು ಸ್ವೀಕರಿಸುತ್ತಿರುವುದು (ಪ್ರಮಾಣ ಮಾಡುತ್ತಿರುವುದು).



ಚಿತ್ರ 3. ತರಗತಿಯನ್ನು ಪ್ರವೇಶಿಸುತ್ತಿರುವ ಮಗುವನ್ನು ಖುಷಿಯಿಂದ ಬರಮಾಡಿಕೊಳ್ಳುತ್ತಿರುವ ಶಿಕ್ಷಕಿ.

## ಸ್ವ-ಅರಿವು ಹಾಗೂ ಸಾಮಾಜಿಕ ಅರಿವು

ಉಲ್ಲಾಸಮಯ ವಾತಾವರಣವನ್ನು ಸೃಷ್ಟಿಸಲು ಶಿಕ್ಷಕರು ಮಕ್ಕಳೊಂದಿಗೆ ನೃತ್ಯ, ನಾಟಕ ಅಭಿನಯ, ಗುಂಪು ಚರ್ಚೆ (circle time) ಇವುಗಳನ್ನು ಒಳಗೊಂಡಂತಹ ಮೋಜಿನ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುತ್ತಾರೆ. ಆಲಂಗಿಸುವುದು, ಪರಸ್ಪರ ಕೈಗಳನ್ನೆತ್ತಿ ತಟ್ಟುವುದರ (high-fives) ಜೊತೆಗೆ ಸ್ವಾಗತಿಸುವ ಇನ್ನಿತರ ಕೆಲವು ನಿರ್ದಿಷ್ಟ ಹಾವಭಾವಗಳಲ್ಲಿ ಮಕ್ಕಳು ಆಯ್ದುಕೊಳ್ಳುವ ಯಾವುದಾದರೊಂದು ಸನ್ನೆಯನ್ನು ಬಳಸಿ ಅವರನ್ನು ಬರಮಾಡಿಕೊಳ್ಳುತ್ತೇವೆ. ಆ ಮೂಲಕ ನಾವು ವಾತಾವರಣವನ್ನು ಉತ್ಸಾಹಭರಿತವನ್ನಾಗಿಡುತ್ತೇವೆ. ಅವರ ದಿನವು ಹೇಗೆ ಸಾಗುತ್ತಿದೆ, ಅವರಿಗೆ ಏನು ಅನ್ನಿಸುತ್ತಿದೆ, ಅವರ ಮನಸ್ಥಿತಿ ಬದಲಾಗಿದ್ದರೆ ಅದಕ್ಕೆ ಕಾರಣ ಏನು ಇತ್ಯಾದಿಗಳನ್ನು ನಾವು ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತೇವೆ. ಇದು ಮಕ್ಕಳಿಗೆ ತಮ್ಮನ್ನು ತಾವು ಅರ್ಥ ಮಾಡಿಕೊಳ್ಳಲು ಕೂಡ ನೆರವಾಗುತ್ತದೆ. ಅವರಲ್ಲಿ ಸ್ವಯಂ–ಅರಿವು ಮತ್ತು ಸ್ವಯಂ ಪ್ರೇರಣೆಯು ಮೂಡುವಂತೆ ಮಾಡಲು, ಪರೀಕ್ಷೆಗಳನ್ನು ನಡೆಸಿದ ಮೇಲೆ ಉತ್ತರ ಪತ್ರಿಕೆಗಳನ್ನು ಅವರಿಗೆ ಮರಳ ನೀಡಲಾಗುತ್ತದೆ. ಇದರಿಂದ ಅವರಿಗೆ ಪರೀಕ್ಷೆಯಲ್ಲಿ ತಾವು ಹೇಗೆ ಮಾಡಿದ್ದೇವೆ, ಏನು ಮಾಡಬಹುದಿತ್ತು, ಇನ್ನಷ್ಟು ಚೆನ್ನಾಗಿ ಕಲಿಯಲು ಏನನ್ನು ಮಾಡಬೇಕು, ಮುಂಬರುವ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಅವರು ತಾವೇ ಯಾವ ಗುರಿಗಳನ್ನು ನಿರ್ಧರಿಸಿಕೊಳ್ಳಬಹುದು ಇತ್ಯಾದಿ ಸ್ಪಷ್ಟ ಚಿತ್ರಣ ಸಿಗುತ್ತದೆ.

## ಸ್ವ-ನಿರ್ವಹಣೆ

ಭಾವನೆಗಳ ನಿರ್ವಹಣೆ ಅಥವಾ ನಿಭಾವಣೆ ಎಂದರೆ ಅವುಗಳನ್ನು ಅದುಮಿಡುವುದಲ್ಲ. ಇದು ಭಾವನಾತ್ಮಕ ಆರೋಗ್ಯವು ಚೆನ್ನಾಗಿರುವುದರ ಸೂಚಕವಾಗಿದೆ. ಎರಡನೇ ತರಗತಿಯ ಬಾಲಕಿಯೊಬ್ಬಳ ನೀರಿನ ಬಾಟಲಿಯು ತರಗತಿ ಕೋಣೆಯಲ್ಲಿಯೇ ಕಳೆದುಹೋಯಿತು. ಅವಳು ಜೋರಾಗಿ ಅಳುತ್ತಿದ್ದಳು. ತಾನು ಕಲಿತಿದ್ದ ನಡವಳಿಕೆಯಂತೆ ತನ್ನ ಭಾವನೆಯನ್ನು ವ್ಯಕ್ತಪಡಿಸುವ ರೀತಿ ಅವಳದಾಗಿತ್ತು. ಈಗ, ಶಿಕ್ಷಕರು ಈ ಸನ್ನಿವೇಶವನ್ನು ನಿಭಾಯಿಸಬೇಕಿತ್ತು. ಇಂತಹ ಸನ್ನಿವೇಶಗಳಲ್ಲಿ ಶಿಕ್ಷಕರು ವಿದ್ಯಾರ್ಥಿಗಳಿಗೆ ತಮ್ಮ ಭಾವನೆಗಳನ್ನು ನಿಯಂತ್ರಿಸಲು ಹಾಗೂ ಸದ್ಯ ಎದುರಿಗಿರುವ ಸಮಸ್ಯೆಗೆ ಪರಿಹಾರವೊಂದನ್ನು ಕಂಡುಕೊಳ್ಳಲು ನೆರವಾಗಬೇಕು. ಈ ಪ್ರಕರಣದಲ್ಲಿ, ಶಿಕ್ಷಕರು ಮೊದಲು ಅವಳಿಗೆ ಅಳುವುದನ್ನು ನಿಲ್ಲಿಸಲು ನೆರವಾದರು. ನಂತರ, ಅವರು ಬಾಟಲಿಯನ್ನು ಹುಡುಕಲು ಆರಂಭಿಸಿದರು. ಹುಡುಕಾಟದ ನಂತರ ನೀರಿನ ಬಾಟಲಿಯು ಅವರಿಗೆ ಸಿಕ್ಕಿತು. ಹೀಗೆ ಮಾಡುವ ಮೂಲಕ ಶಿಕ್ಷಕರು ಆ ಮಗುವಿಗೆ ಮತ್ತು ತರಗತಿಯ ಉಳಿದೆಲ್ಲ ಮಕ್ಕಳಿಗೆ, ಸಮಸ್ಯೆ ಎದುರಾದಾಗ, ಅಳುವುದರ ಬದಲಾಗಿ ಆ ಸಮಸ್ಯೆಗೆ ಪರಿಹಾರವನ್ನು ಹೇಗೆ ಕಂಡುಕೊಳ್ಳಬೇಕು ಎಂಬುದಾಗಿ ಅವರು ಆಲೋಚಿಸಬೇಕು ಎನ್ನುವುದನ್ನು ತೋರಿಸಿಕೊಟ್ಟರು.

## ಹೊಣೆಗಾರಿಕೆಯ ಪ್ರಜ್ಞೆ

ಆರು ಮತ್ತು ಏಳನೇ ತರಗತಿಯ ವಿದ್ಯಾರ್ಥಿಗಳು, ವಿವಿಧ ಚಟುವಟಿಕೆಗಳನ್ನು ನಡೆಸುವಾಗ ಶಿಕ್ಷಕರ ನೆರವಿಲ್ಲದೇ ಪರಸ್ಪರರ ಸಹಯೋಗ ಮತ್ತು ಸಹಕಾರದಲ್ಲಿ ಹೇಗೆ ಕೆಲಸ ಮಾಡಬೇಕೆಂಬುದನ್ನು ಕಲಿತಿದ್ದಾರೆ. ಶಿಕ್ಷಕರ ದಿನವಾದ ಸೆಪ್ಟಂಬರ್ 5ರಂದು, ವಿದ್ಯಾರ್ಥಿಗಳು ಶಿಕ್ಷಕರಿಗಾಗಿ ಸಾಂಸ್ಕೃತಿಕ ಕಾರ್ಯಕ್ರಮವೊಂದನ್ನು ಆಯೋಜಿಸಿದರು. ತಾವು ಯೋಜಿಸಿದಂತೆ ಎಲ್ಲ ಕಾರ್ಯಕ್ರಮಗಳನ್ನು ನಡೆಸಲು ಬೇಕಾದಷ್ಟು ಸಮಯ ಉಳಿದಿಲ್ಲ ಎಂದು ಮನವರಿಕೆಯಾದಾಗ ಅವರು ಗಾಬರಿಗೊಳ್ಳಲಿಲ್ಲ. ಬದಲಾಗಿ, ಹಲವಾರು ಚಟುವಟಿಕೆಗಳನ್ನು ಚುಟುಕಾಗಿ ಮುಗಿಸುವುದರ ಮೂಲಕ ಸನ್ನಿವೇಶವನ್ನು ಬುದ್ಧಿವಂತಿಕೆಯಿಂದ ನಿಭಾಯಿಸಿದರು ಮತ್ತು ಕಾರ್ಯಕ್ರಮವನ್ನು ಯೋಜಿತ ರೀತಿಯಲ್ಲಿ ಮಾಡಿ ಮುಗಿಸಿದರು.

ಇದು, ಅಭ್ಯಾಸ ಹಾಗೂ ಭಾಗವಹಿಸುವಿಕೆಯ ಮೂಲಕ ಕಾಲಾನಂತರದಲ್ಲಿ ಅವರು ಬೆಳೆಸಿಕೊಂಡ ಪ್ರಬುದ್ಧತೆ ಮತ್ತು ಶಾಂತತೆಯನ್ನು ತೋರಿಸುತ್ತಿತ್ತು.

ವಿದ್ಯಾರ್ಥಿಗಳದೇ ಮುಂದಾಳತ್ವವಿರುವ ಸಮಿತಿಗಳಲ್ಲಿ ಸಭೆ, ಚರ್ಚೆಗಳು ನಡೆಯುತ್ತವೆ, ಅಲ್ಲಿ ವಿದ್ಯಾರ್ಥಿಗಳು ತಮ್ಮ ಆಲೋಚನೆ, ಅಭಿಪ್ರಾಯ ಮತ್ತು ವಿಚಾರಗಳನ್ನು ವ್ಯಕ್ತಪಡಿಸುತ್ತಾರೆ. ಈ ಸಮಿತಿಗಳು ವಿದ್ಯಾರ್ಥಿಗಳಲ್ಲಿ ತಾವು ಒಬ್ಬರಿಗೊಬ್ಬರು ಸೇರಿದವರು, ಸಂಬಂಧಿಸಿದವರು, ಒಟ್ಟಾಗಿ ಕೆಲಸದಲ್ಲಿ ತೊಡಗಿಕೊಳ್ಳಬೇಕಾದವರು ಎಂಬ ಪ್ರಜ್ಞೆಯನ್ನು ಉಂಟುಮಾಡುವುದರ ಜೊತೆಗೆ ಹೊಣೆಗಾರಿಕೆಯ ಭಾವವನ್ನು ಕೂಡ ಪೋಷಿಸುತ್ತವೆ. ಇದು, ಧನಾತ್ಮಕ ಶಾಲಾ ಸಂಸ್ಕೃತಿಯನ್ನು ಬೆಳೆಸಲು ವಿಶೇಷವಾಗಿ ಮುಖ್ಯ. ಆಗ ವಿದ್ಯಾರ್ಥಿಗಳಿಗೆ ತಮಗೂ ಒಂದು ಬೆಲೆಯಿದೆ, ಗೌರವವಿದೆ ಎಂದೆನಿಸುತ್ತದೆ.

## ಜವಾಬ್ದಾರಿಯುತವಾಗಿ ನಿರ್ಧಾರವನ್ನು ತೆಗೆದುಕೊಳ್ಳುವುದು

ಶಾಲೆಯಲ್ಲಿ ಹಲವಾರು ಸಮಿತಿಗಳು ಮತ್ತು ಗುಂಪುಗಳಿವೆ. ಇವುಗಳನ್ನು ಸ್ಪಂದನಶೀಲವಾಗಿರುವಂತೆ ಹಾಗೂ ಕ್ರಿಯಾ-ಶೀಲವಾಗಿರುವಂತೆ ಮಾಡುವ ನಿಟ್ಟಿನಲ್ಲಿ ಸಲಹೆಗಳನ್ನು ನೀಡಲು ವಿದ್ಯಾರ್ಥಿಗಳನ್ನು ಉತ್ತೇಜಿಸಲಾಗುತ್ತದೆ. ಬುನಾದಿ ಸಾಕ್ಷರತೆ ಮತ್ತು ಸಂಖ್ಯಾಜ್ಞಾನ (FLN - Foundational Literacy and Numeracy) ಗುಂಪಿನಲ್ಲಿ ಇದ್ದ ಅರವಿಂದ ಎಂಬ ಹುಡುಗ ಗಣಿತದಲ್ಲಿ ಚೆನ್ನಾಗಿದ್ದ. ಆದರೆ ಇಂಗ್ಲಿಷ್ ನಲ್ಲಿ ಅಷ್ಟೇನೂ ಚೆನ್ನಾಗಿರಲಿಲ್ಲ. ಅವನು ಇಂಗ್ಲಿಷ್ನಲ್ಲಿ ಕಡಿಮೆ ಅಂಕವನ್ನು ತೆಗೆದುಕೊಂಡಾಗ, ಅವನ ಇಂಗ್ಲಿಷ್ ಶಿಕ್ಷಕರು ಉತ್ತರಪತ್ರಿಕೆಯ ಮೇಲೆ ತರಗತಿ ಶಿಕ್ಷಕರ ಸಹಿಯನ್ನು ಹಾಕಿಸಿಕೊಂಡು ಬರುವಂತೆ ಹೇಳಿದರು. ತರಗತಿ ಶಿಕ್ಷಕರು ಇಂಗ್ಲಿಷ್ನಲ್ಲಿ ಕೂಡ ಹೇಗೆ ಚೆನ್ನಾಗಿ ಮಾಡಬಹುದೆಂದು ಅವನೊಂದಿಗೆ ಚರ್ಚಿಸಿದರು. ಮಕ್ಕಳೊಂದಿಗೆ ಆಪ್ತವಾಗಿ ಮಾತನಾಡುವುದು ಕೂಡ ಅವರಿಗೆ ಯಾವುದೇ ಸಂಗತಿಯನ್ನು ಅರ್ಥಮಾಡಿಕೊಳ್ಳಲು, ಜವಾಬ್ದಾರಿಯುತ ನಿರ್ಧಾರಗಳನ್ನು ತೆಗೆದುಕೊಳ್ಳಲು ಸಹಾಯ ಮಾಡುತ್ತದೆ. ಆ ಹುಡುಗನು ಶಿಕ್ಷಕರ ಮಾತನ್ನು ಸಕಾರಾತ್ಮಕವಾಗಿ ತೆಗೆದುಕೊಂಡಿದ್ದಾನೆ. ಈಗ ಇಂಗ್ಲಿಷ್ ತರಗತಿಯಲ್ಲಿ ಕೂಡ ಚೆನ್ನಾಗಿ ಭಾಗವಹಿಸುತ್ತಿದ್ದಾನೆ.

## ಉಪಸಂಹಾರ

ನಮ್ಮ ಶಾಲೆಯಲ್ಲಿ ನಾವು ಸುರಕ್ಷಿತ ಹಾಗೂ ಭಯಮುಕ್ತ ವಾತಾವರಣವನ್ನು ನಿರ್ಮಿಸುತ್ತೇವೆ. ಇದರಿಂದಾಗಿ ವಿದ್ಯಾರ್ಥಿಗಳು ಮತ್ತು ಶಿಕ್ಷಕರ ನಡುವೆ ಹಾಗೂ ಇತರ ಸಹಾಯಕ ಸಿಬ್ಬಂದಿಗಳ ಜೊತೆಗೆ ಕೂಡ ಪರಸ್ಪರ ಹಿತಕರವಾದ ರೀತಿಯಲ್ಲಿ ಅನುಸಂಧಾನ ನಡೆಯಲು ಸಾಧ್ಯವಾಗುತ್ತದೆ. ನಾವು ಒಟ್ಟಾಗಿ ಆಟವಾಡುತ್ತೇವೆ, ನಮ್ಮ ಸಂತೋಷ, ದುಃಖಗಳನ್ನು ಹಂಚಿಕೊಳ್ಳುತ್ತೇವೆ, ನಮ್ಮ ಭಾವನೆಗಳನ್ನು ವ್ಯಕ್ತಪಡಿಸುತ್ತೇವೆ ಹಾಗೂ ಒಬ್ಬರನ್ನೊಬ್ಬರು ಬೆಂಬಲಿಸುತ್ತೇವೆ.

ಮಕ್ಕಳಿಗೆ ಸಾಮಾಜಿಕ-ಭಾವನಾತ್ಮಕ ಕಲಿಕೆಯು ಕೇವಲ ಸಫಲ ಹಾಗೂ ಸಂತೃಪ್ತ ಜೀವನವನ್ನು ನಡೆಸಲು ಮಾತ್ರವಲ್ಲ ಅವರ ಶೈಕ್ಷಣಿಕ ಯಶಸ್ಸಿಗೂ ಅದು ಅತ್ಯಂತ ನಿರ್ಣಾಯಕ ಎನ್ನುವುದನ್ನು ಪ್ರಮುಖವಾಗಿ ಗಮನಿಸಬೇಕು. ಸಕಾರಾತ್ಮಕ ಹಾಗೂ ಬೆಂಬಲಪೂರಕ ಕಲಿಕೆಯ ವಾತಾವರಣವನ್ನು ಪೋಷಿಸುವುದರ ಮೂಲಕ ಹಾಗೂ ಅಗತ್ಯವಾದ ಸಂಪನ್ಮೂಲಗಳನ್ನು, ಬೆಂಬಲವನ್ನು ಒದಗಿಸುವುದರ ಮೂಲಕ ವಿದ್ಯಾರ್ಥಿಗಳು ಬದುಕಿನಲ್ಲಿ ಯಶಸ್ಸು ಪಡೆಯುವಂತಾಯಾಗಲು ಬೇಕಾದ ಸಾಮಾಜಿಕ-ಭಾವನಾತ್ಮಕ ಕೌಶಲಗಳನ್ನು ಪಡೆದು-ಕೊಳ್ಳುವ ಹಾಗೆ ನಮ್ಮ ಶಾಲೆಯು ಸತತವಾಗಿ ಪ್ರಯತ್ನಿಸುತ್ತಿದೆ.

* ವಿದ್ಯಾರ್ಥಿಗಳ ಗುರುತನ್ನು ರಕ್ಷಿಸಲು ಅವರ ಹೆಸರುಗಳನ್ನು ಬದಲಾಯಿಸಲಾಗಿದೆ.

**ಅಂತಿಮ ಟಿಪ್ಪಣಿ :**


i Housing Children: South Auckland, The Housing Pathways Longitudinal Study - Scientific Figure on ResearchGate. https://www.researchgate.net/figure/Bronfenbrenners-ecological-model-Diagram-by-Joel-Gibbs-based-on-Bronfenbrenners-1979_fig1_311843438





**ಫರ್ಝಾನಾ ಬೇಗಂ** ಅವರು ಕರ್ನಾಟಕದ ಕಲಬುರಗಿಯ ಅಜೀಂ ಪ್ರೇಮ್‌ಜಿ ಶಾಲೆಯಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕಿಯಾಗಿದ್ದಾರೆ. ಅಜೀಂ ಪ್ರೇಮ್‌ಜಿ ಶಾಲೆಯನ್ನು ಸೇರುವುದಕ್ಕೂ ಮೊದಲು ಅವರು ಕಲಬುರಗಿಯ ಕೇಂದ್ರೀಯ ವಿದ್ಯಾಲಯದಲ್ಲಿ ಕೆಲಸ ಮಾಡುತ್ತಿದ್ದರು. ಅವರಿಗೆ ಪ್ರಾಥಮಿಕ ತರಗತಿಗಳಿಗೆ ಪರಿಸರ ವಿಜ್ಞಾನ, ಇಂಗ್ಲಿಷ್ ಮತ್ತು ಗಣಿತವನ್ನು ಬೋಧಿಸಿದ ಅನುಭವವಿದೆ. ಅವರು ವಿಜಯಪುರದ ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾನಿಲಯದಿಂದ ವಿಜ್ಞಾನ ವಿಷಯದಲ್ಲಿ (PCM) ಪದವಿ ಪಡೆದಿದ್ದಾರೆ. ಅವರಿಗೆ ಪುಸ್ತಕಗಳನ್ನು ಓದುವುದರಲ್ಲಿ ಮತ್ತು ಹೊರಾಂಗಣ ಆಟಗಳನ್ನು ಆಡುವುದರಲ್ಲಿ ಆಸಕ್ತಿಯಿದೆ. ಅವರನ್ನು farzana.begum@azimpremjifoundation.org ಮೂಲಕ ಸಂಪರ್ಕಿಸಬಹುದು.


ಅನುವಾದ: **ಸಹನಾ ಹೆಗಡೆ** | ಪರಿಶೀಲನೆ: **ಲತಾ ಕೆ.ಸಿ.**